ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/35/ಎಲ್ಆರ್ಡಿಸಿ/ಎನ್ಬಿಎ/2014-15

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು-560001
ದಿನಾಂಕ: 20.04.2016

## ಸುತ್ತೋಲೆ

ವಿಷಯ: ಮಾನ್ಯತೆ ಪಡೆಯುವ ಸಂಬಂಧ ಸ್ವಯಂ ಮೌಲ್ಯಮಾಪನ ವರದಿ(SAR) ಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವ ದಿನಾಂಕವನ್ನು ಕೊನೆಯದಾಗಿ ವಿಸ್ತರಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಪತ್ರಗಳ ಸಂಖ್ಯೆ: ಡಿಟಿಇ/35/ಎಲ್ಆರ್ಡಿಇ/ಎನ್ಬಿಎ/2014-15, ದಿ: 25-01-2016 ಮತ್ತು 29-02-2016

*****

ಮೇಲ್ಕಂಡ ವಿಷಯ ಹಾಗು ಉಲ್ಲೇಖಗಳಿಗೆ ಸಂಬಂಧಿಸಿದಂತೆ ರಾಜ್ಯದ ಸರ್ಕಾರಿ ಪಾಲಿಟೆಕ್ನಿಗಳು ತಮ್ಮ ಸಂಸ್ಥೆಯಲ್ಲಿರುವ ಎಲ್ಲಾ ಪ್ರೋಗ್ರಾಂಗಳಲ್ಲಿ ಮಾನ್ಯತೆ ಪಡೆಯವ ಸಂಬಂಧ ಭರ್ತಿ ಮಾಡಿದ ಸ್ವಯಂ ಮೌಲ್ಯಮಾಪನ ವರದಿಗಳನ್ನು ವಿಶ್ಲೇಷಿಸಿ, ಸ್ಪಷ್ಟ ಅಭಿಪ್ರಾಯದೊಂದಿಗೆ: 30.03.2016 ರೊಳಗಾಗಿ ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿತ್ತು. ಆದರೆ, ಅನೇಕ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು SAR ವರದಿಗಳನ್ನು ಸಲ್ಲಿಸುವ ದಿನಾಂಕವನ್ನು ಮರುವಿಸ್ತರಣೆ ಮಾಡಲು ಕೋರಿರುವ ಪ್ರಯುಕ್ತ ಭರ್ತಿ ಮಾಡಿದ ಸದರಿ ವರದಿಗಳನ್ನು **ಕೊನೆಯದಾಗಿ ದಿ:20.05.2016** ರೊಳಗಾಗಿ ಹಾರ್ಡ್‌ಪ್ರತಿಗಳನ್ನು ನಿರ್ದೇಶನಾಲಯದ ಮಾನ್ಯತಾ ಕೋಶ, ಕೊಠಡಿ ಸಂಖೆ:307ಬಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ, ಬೆಂಗಳೂರು-560001 ಕ್ಕೆ ಹಾಗೂ ಸಾಫ್ಟ್ ಪ್ರತಿಗಳನ್ನು ಮಾನ್ಯತಾ ಕೋಶದ ಮಿಂಚಂಚೆ : dtenba@gmail.com ಗೆ ಅತಿಜರೂರಾಗಿ ಕಳುಹಿಸಲು ಈ ಮೂಲಕ ಸೂಚಿಸಲಾಗಿದೆ.

ನಿರ್ದೇಶಕರು

o/c 22/4/16

ಇವರಿಗೆ,

1 ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ
2 ಇ-ಆಡಳಿತ ವಿಭಾಗದ ಸಂಯೋಜಕರ ಸೂಕ್ತ ಕ್ರಮಕ್ಕಾಗಿ
3 ನಿರ್ದೇಶಕರ ಆಪ್ತ ಸಹಾಯಕರ ಮಾಹಿತಿಗಾಗಿ.